SEVA BHARATHI
सेवा ही परमो धर्मः

# ಸೇವಾಪಥ


ಸೇವಾಭಾರತಿ(ರಿ.), ಬೆಳ್ತಂಗಡಿ ತಾ॥ ಇದರ
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ-2022)

ಸಂಪುಟ : 05
ಸಂಚಿಕೆ : 10

ಮಾಸಿಕ e-ನ್ಯೂಸ್ ಲೆಟರ್ – ಅಕ್ಟೋಬರ್ 2024

ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ–।।, ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ. – 574 216

## ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕೇಂದ್ರವಾಗಲಿದೆ ಬೈಂದೂರಿನ ಹೇನಬೇರು ಶಾಲೆ




20ರ ಸಂಭ್ರಮ
2004–2024

## ಭೂಮಿಪೂಜೆ ಮತ್ತು ಶಿಲಾನ್ಯಾಸ

## ಶಿಶಿಲದಲ್ಲಿ 29ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನೆ

## ಬೆನ್ನುಮುರಿತಕ್ಕೊಳಗಾದವರಿಗೆ ಬೆನ್ನೆಲುಬಾದ ಡಾಕ್ಟರ್

ಯಶೋಗಾಥೆ

## ನಮ್ಮಿಂದಿಷ್ಟು

ಎಲ್ಲರಿಗೂ ನಮಸ್ಕಾರಗಳು,

ನಮ್ಮ ಸಂಸ್ಥೆಯ ಕಾರ್ಯವಿಸ್ತಾರಕ್ಕಾಗಿ ಇನ್ನೊಂದು ಕೇಂದ್ರ ಬೈಂದೂರಿನಲ್ಲಿ ಪ್ರಾರಂಭವಾಗುತ್ತಿರುವುದು ಸಂಸ್ಥೆಯ ಮೈಲುಗಲ್ಲು. ನಮ್ಮ ಆರು ವರ್ಷದ ಪುನಶ್ಚೇತನ ಕೇಂದ್ರದ ಅನುಭವದಲ್ಲಿ ಗುರುತಿಸಲ್ಪಟ್ಟ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಲ್ಲಿ ಸುಮಾರು 15% ಮಂದಿ ಒತ್ತಡಗಾಯಗಳಿಂದ ಬಳಲುತ್ತಿರುವವರು. ಅವರಿಗೆ ಕುಳಿತುಕೊಳ್ಳಲಾಗದ ಸ್ಥಿತಿ. ಕುಳಿತರೆ ಗಾಯ ಉಲ್ಬಣ, ಮಲಗಿರಬೇಕಾದ ಅನಿವಾರ್ಯತೆ. ಮಲಗಿದಲ್ಲೂ ಗಾಯ ಗುಣಪಡಿಸುವ ಬಗ್ಗೆ ಸೂಕ್ತ ಅರಿವಿಲ್ಲ. ಈ ದೀರ್ಘಕಾಲಿಕ ಸಮಸ್ಯೆಗಳನ್ನು ಪ್ರಾರಂಭದಲ್ಲಿ ಸೂಕ್ತ ಆರೈಕೆ, ಔಷಧಿಗಳಿಂದ ಗುಣಪಡಿಸಿಕೊಳ್ಳಬಹುದು. ಆದರೆ ಸೂಕ್ತ ಅನುಭವಿ ತಜ್ಞರ ಕೊರತೆಯಿದೆ. ದುಬಾರಿ ಔಷಧಿಯನ್ನು ಖರೀದಿಸಲಾಗದ ಬಡತನ, ಒಟ್ಟಿನಲ್ಲಿ ಜೀವನ ಹೈರಾಣ.

ಇಂತಹ ಗಾಯ ನಿರ್ವಹಣೆಗಾಗಿ ಮತ್ತು ಅವರ ಪುನಶ್ಚೇತನಕ್ಕಾಗಿಯೇ ಒಂದು ಕೇಂದ್ರದ ಅವಶ್ಯಕತೆಯನ್ನು ಮನಗಂಡು ಬೈಂದೂರು ಶಾಸಕರಲ್ಲಿ ಬಿನ್ನಹ ಮಾಡಿದ್ದರ ಪರಿಣಾಮವಾಗಿ ಬೈಂದೂರು ತಾಲೂಕಿನ ಪಡುವರಿ ಗ್ರಾಮದಲ್ಲಿರುವ ಹೇನಬೇರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯು ನಮಗೆ ದೊರಕಿದೆ. ಹಲವಾರು ವರ್ಷಗಳಿಂದ ವಿದ್ಯಾರ್ಥಿಗಳ ಕೊರತೆಯಿಂದಾಗಿ ಮುಚ್ಚಿದ್ದ ಶಾಲೆ ಮುಂದಿನ ದಿನಗಳಲ್ಲಿ ಒತ್ತಡಗಾಯ ಹೊಂದಿದ ಬೆನ್ನುಹುರಿ ಮುರಿತಕ್ಕೊಳಗಾದ ದಿವ್ಯಾಂಗರ ಬಾಳಲ್ಲಿ ಮಹತ್ತರ ಪಾತ್ರ ನಿರ್ವಹಿಸಬಲ್ಲುದು.

ಅಲ್ಲಿನ ಶಾಸಕರ ಕನಸಾದ ಸಮೃದ್ಧ ಬೈಂದೂರು ಪರಿಕಲ್ಪನೆಯ ಸೇವಾಸೇತು ಯೋಜನೆಯಡಿ ಈ ಸೇವೆಯು ಲೋಕಾರ್ಪಣಗೊಳ್ಳಲಿದೆ.

ಸಂಸ್ಥೆಯ ಸಬಲನಿ ಯೋಜನೆಯಡಿ ಕೊಕ್ಕಡದಲ್ಲಿ ಕಳೆದ ತಿಂಗಳು ಪ್ರಾರಂಭಗೊಂಡ ಟೈಲರಿಂಗ್ ತರಬೇತಿ ಶಿಬಿರವು ಯಶಸ್ವಿಯಾಗಿ ಸಂಪನ್ನಗೊಂಡಿತು. ಈ ತಿಂಗಳು 22ರಂದು 29ನೇ ಶಿಬಿರವು ಶಿಶಿಲದಲ್ಲಿ ಪ್ರಾರಂಭಗೊಂಡಿದೆ. ಒಟ್ಟಿನಲ್ಲಿ ಮಹಿಳೆಯರು ಸ್ವಾವಲಂಬಿ ಬದುಕು ಕಾಣ–ಬೇಕಾಗಿರುವುದು ಈ ಯೋಜನೆಯ ಉದ್ದೇಶ.

ಮುಂದಿನ ತಿಂಗಳು 14 ಮಹತ್ತರದ ದಿನವಾಗಲಿದೆ. ಅಂದು ಪುನಶ್ಚೇತನ ಕೇಂದ್ರ ಮತ್ತು ಕಾರ್ಯಾಲಯಕ್ಕಾಗಿ ನೂತನ ಕಟ್ಟಡದ ಭೂಮಿಪೂಜೆ, ಶಿಲಾನ್ಯಾಸ ಕಾರ್ಯಗಳು ನಡೆಯಲಿದೆ. ಅತಿಥಿ ಅಭ್ಯಾಗತರನ್ನು ಕರೆಯುವ, ದಾನಿಗಳನ್ನು ಒಂದುಗೂಡಿಸುವುದು ಜನಪ್ರತಿನಿಧಿಗಳಿಗೆ ಅಹವಾಲು ಸಲ್ಲಿಸುವ, ಸರಕಾರಕ್ಕೆ ಮನವಿ ನೀಡುವ ಕಾರ್ಯದ ಜೊತೆ ಕರಾವಳಿಯ ಇಬ್ಬರು ಸಾಧಕರನ್ನು ಗೌರವಿಸಲಿಕ್ಕಿದ್ದೇವೆ. ತಮ್ಮೆಲ್ಲರಿಗೂ ಮಗದೊಮ್ಮೆ ಪತ್ರಿಕೆಯನ್ನು ಈ ಸಂಚಿಕೆಯಲ್ಲಿ ನೀಡಿದ್ದೇವೆ.



*ಒಟ್ಟಿನಲ್ಲಿ ಸೇವೆಯೇ ಪರಮಧರ್ಮ*

ವಂದನೆಗಳೊಂದಿಗೆ

ಇತೀ ತಮ್ಮವ

**ಕೆ. ವಿನಾಯಕ ರಾವ್**

## ನಮ್ಮ ವಿಳಾಸ

**ಪ್ರಧಾನ ಕಚೇರಿ :**

ಸೇವಾನಿಕೇತನ, ಕನ್ಯಾಡಿ–II
ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು – 574 216
ಮೊ.: 99454 91241

**ಸೇವಾ ಕೇಂದ್ರ :**

ಸೇವಾಧಾಮ
(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)
ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ
ಕೊಕ್ಕಡ ಗ್ರಾಮ – 574 198
ಮೊ.: 94482 54888

## ನಮ್ಮ ತಂಡ

| | |
|---|---|
| ಶ್ರೀಮತಿ ಸ್ವರ್ಣಗೌರಿ | – ಅಧ್ಯಕ್ಷರು |
| ಶ್ರೀ ಕೆ. ಯು. ಗಿರೀಶ್ ರಾವ್ | – ಉಪಾಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | – ಕಾರ್ಯದರ್ಶಿ |
| ಶ್ರೀ ಕೆ. ವಿನಾಯಕ ರಾವ್ | – ಖಜಾಂಚಿ |
| ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | – ಟ್ರಸ್ಟಿ |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | – ಟ್ರಸ್ಟಿ |


## ಸಲಹಾ ಮಂಡಳಿ

1. ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
2. ಡಾ. ಎ. ಜಯಕುಮಾರ್ ಶೆಟ್ಟಿ
3. ಶ್ರೀಮತಿ ಮನೋರಮ ಭಟ್
4. ಶ್ರೀ ಉದಯಶಂಕರ್
5. ಶ್ರೀ ವಿಜಯ ಕೊಡವೂರು
6. ಶ್ರೀಮತಿ ಜೊಯ್ಸ್ ಫಿರೇರಾ
7. ಶ್ರೀ ನಾಗೇಂದ್ರ ಮಾಗಡಿ
8. ಶ್ರೀ ರಜತ್‌ರಾವ್, ಧರ್ಮಸ್ಥಳ
9. ಶ್ರೀ ಗಣೇಶ್ ಶೆಂಡ್ಯೆ
10. ಡಾ. ಮುರಳೀಧರ ನಾಯಕ್

## ಸಂಚಾಲಕರು

ಶ್ರೀ ಕೆ. ಪುರಂದರ ರಾವ್

# ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕೇಂದ್ರವಾಗಲಿದೆ ಬೈಂದೂರಿನ ಹೇನಬೇರು ಶಾಲೆ




(ಬೈಂದೂರು ಅ. 22): ಸೇವಾಭಾರತಿ ಕನ್ಯಾಡಿಯು ಕಳೆದ 6 ವರ್ಷಗಳಿಂದ 6 ಜಿಲ್ಲೆಗಳ ವ್ಯಾಪ್ತಿಗಳಲ್ಲಿ 700ಕ್ಕೂ ಹೆಚ್ಚು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಪುನಶ್ಚೇತನವನ್ನು ನೀಡುತ್ತಾ ಬಂದಿದ್ದು. ಇದರಲ್ಲಿ 100ಕ್ಕೂ ಹೆಚ್ಚು ಮಂದಿ ಒತ್ತಡಗಾಯದಿಂದ ಬಳಲುತ್ತಿದ್ದು ಇದರ ನಿರ್ವಹಣೆಯನ್ನು ಮಾಡುವುದು ಅತಿಕಷ್ಟ. ಒತ್ತಡ ಗಾಯಗಳಿರುವಂತಹ ವ್ಯಕ್ತಿಗಳು ಪುನಶ್ಚೇತನವನ್ನು ಪಡೆದುಕೊಳ್ಳುವುದು ಸಹ ಕಷ್ಟದ ಸಂಗತಿ.

ಈ ನಿಟ್ಟಿನಲ್ಲಿ ಬೈಂದೂರಿನ ಪಡುವರಿ ಗ್ರಾಮದಲ್ಲಿರುವ ಹೇನಬೇರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯು 5 ವರ್ಷಗಳಿಂದ ವಿದ್ಯಾರ್ಥಿಗಳ ದಾಖಲಾತಿಯ ಕೊರತೆಯಿಂದ ಮುಚ್ಚಿದ್ದು. ಈ ಶಾಲೆಯನ್ನು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಒತ್ತಡಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರವನ್ನಾಗಿ ಮಾಡುವ ಸಲುವಾಗಿ ಶಿಕ್ಷಣ ಇಲಾಖೆ ಮತ್ತು ಕನ್ಯಾಡಿಯ ಸೇವಾಭಾರತಿ ಸಂಸ್ಥೆಯ ನಡುವೆ ಒಡಂಬಡಿಕೆ ವಿನಿಮಯ ನಡೆಯಿತು. ಸಮೃದ್ಧ ಬೈಂದೂರು ಪರಿಕಲ್ಪನೆಯ ಸೇವಾಸೇತು ಯೋಜನೆಯಡಿಯಲ್ಲಿ ಬೈಂದೂರು ಶಾಸಕರಾದ ಗುರುರಾಜ್ ಗಂಟಿಹೊಳೆ ಅವರ ನೇತೃತ್ವದ ಈ ಕಾರ್ಯಕ್ರಮದಲ್ಲಿ ಒಡಂಬಡಿಕೆ ಪತ್ರವನ್ನು ಬಿಇಒ ಆಫೀಸ್‌ನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ನಾಗೇಶ್ ನಾಯ್ಕ ಮತ್ತು ಸೇವಾಧಾಮ ಸಂಸ್ಥಾಪಕರಾದ ಕೆ. ವಿನಾಯಕ ರಾವ್ ಒಡಂಬಡಿಕೆ ಪತ್ರವನ್ನು ವಿನಿಮಯ ಮಾಡಿಕೊಂಡರು. ಈ ಸಂದರ್ಭದಲ್ಲಿ ಬೈಂದೂರಿನ ಸಮೃದ್ಧ ಜನಸೇವಾ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷ ಸುರೇಶ್ ಶೆಟ್ಟಿ , ಉದ್ಯಮಿ ಪಾಂಡುರಂಗ ಪಡಿಯಾರ್, ಸಾಮಾಜಿಕ ಕಾರ್ಯಕರ್ತ ದಿನಕರ್, ಕರ್ನಾಟಕ ಪ್ರಾಥಮಿಕ ಶಿಕ್ಷಕ ಸಂಘ ಜಿಲ್ಲಾ ಗೌರವಾಧ್ಯಕ್ಷ ವಿಶ್ವನಾಥ ಪೂಜಾರಿ, ಹಾಗೂ ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಚರಣ್ ಕುಮಾರ್ ಉಪಸ್ಥಿತರಿದ್ದರು.

ಮುಂದಿನ ತಿಂಗಳುಗಳಲ್ಲಿ ಈ ಯೋಜನೆಯು ಕಾರ್ಯಾಚರಿಸಲ್ಪಡುತ್ತದೆ ಮತ್ತು ಸುತ್ತಮುತ್ತಲ ಜಿಲ್ಲೆಯಲ್ಲಿ ಒತ್ತಡಗಾಯಗಳಿರುವಂತಹ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಈ ಕೇಂದ್ರ ವರದಾನವಾಗಲಿದೆ ಹಾಗೂ ಅವರ ಜೀವನ ಕ್ರಮ ಸುಗಮವಾಗಲಿದೆ.

# ಸಂಪನ್ನಗೊಂಡ ಉಚಿತ ಟೈಲರಿಂಗ್ ತರಬೇತಿ ಶಿಬಿರ



**ಸೇವಾಭಾರತಿ (ರಿ.), ಕನ್ಯಾಡಿ ಇದರ ನೇತೃತ್ವದಲ್ಲಿ ಸಬಲಿನಿ ಯೋಜನೆಯಡಿ ಶ್ರೀರಾಮ ಸೇವಾ ಟ್ರಸ್ಟ್ (ರಿ.), ಕೊಕ್ಕಡ ಶ್ರೀ ದುರ್ಗಾ ಮಾತೃ ಮಂಡಳಿ ಕನ್ಯಾಡಿ ಇವುಗಳ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ ಉಚಿತ 28ನೇ ಟೈಲರಿಂಗ್ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಅಕ್ಟೋಬರ್ 17 ರಂದು ಶ್ರೀರಾಮ ಸೇವಾಮಂದಿರ ಕೊಕ್ಕಡದಲ್ಲಿ ನಡೆಯಿತು.**

ಕೊಕ್ಕಡ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.), ಅಧ್ಯಕ್ಷರಾದ ಕೆ.ಕೃಷ್ಣ ಭಟ್‌ರವರು ಕೊಕ್ಕಡದ ಗ್ರಾಮೀಣ ಜನರಿಗೆ ಸ್ವಉದ್ಯೋಗ ಮಾಡುವ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದು ಬಹಳ ಸಂತೋಷದ ವಿಷಯ ಹಾಗೂ ಸೇವಾಭಾರತಿ ಸಂಸ್ಥೆಯು ನಡೆಸುವ ಸೇವೆಗಳ ಬಗ್ಗೆ ಶ್ಲಾಘಿಸಿ ಇನ್ನಷ್ಟು ಸೇವೆಯನ್ನು ಮಾಡುವ ಯಶಸ್ಸು ನಿಮ್ಮದಾಗಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಸೇವಾಭಾರತಿ ಕನ್ಯಾಡಿಯ ಅಧ್ಯಕ್ಷೆ ಹಾಗೂ ಬೆಳ್ತಂಗಡಿ ತಾಲೂಕು ಮಹಿಳಾ ಸಹಕಾರಿ ಸಂಘ ಇದರ ಸಿಇಒ ಸ್ವರ್ಣಗೌರಿ ಟೈಲರಿಂಗ್ ಕಲಿಯುವುದರಿಂದ ಬೇರೆಬೇರೆ ರೀತಿಯ ಸ್ವ–ಉದ್ಯೋಗದ ಅವಕಾಶವಿರುತ್ತದೆ.

ಪ್ರಸ್ತುತ ಕಾಲಘಟ್ಟದಲ್ಲಿ ಮಹಿಳೆಯರು ಯಾರಿಗೂ ಅವಲಂಬಿತವಾಗದೆ ಸ್ವಾವಲಂಬಿ ಜೀವನವನ್ನು ನಡೆಸುವುದು ಅತ್ಯಗತ್ಯವೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಟೈಲರಿಂಗ್ ತರಬೇತುದಾರರಾದ ಗೀತಾ ತರಬೇತಿಯಲ್ಲಿ ತಿಳಿಸಿಕೊಟ್ಟ ಹೊಲಿಗೆಯ ವಿಧಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿ, ತಮಗೆ ಶಿಬಿರಾರ್ಥಿಗಳಿಂದ ಕಲಿಯುವ ಸಂದರ್ಭದಲ್ಲಿ ಉತ್ತಮ ಪ್ರತಿಕ್ರಿಯೆ ದೊರಕುತ್ತಿತ್ತು ಎಂದು ಸಂತಸ ವ್ಯಕ್ತಪಡಿಸಿದರು.

ಶ್ರೀ ದುರ್ಗಾ ಮಾತೃ ಮಂಡಳಿಯಿಂದ ಹಾಗೂ ಕೊಕ್ಕಡ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ ಇವರುಗಳು ಸೇವಾಭಾರತಿ ಸಂಸ್ಥೆಗೆ 2 ಟೈಲರಿಂಗ್ ಮೆಷಿನ್ ನೀಡಿ ಮಹಿಳೆಯರ ಸ್ವಉದ್ಯೋಗಕ್ಕೆ ದಾರಿದೀಪವಾಗಿದ್ದಾರೆ.

ನಮ್ಮ ಸಂಸ್ಥೆಯ ಪರವಾಗಿ ಟೈಲರಿಂಗ್ ತರಬೇತು–ದಾರರಾದ ಶ್ರೀಮತಿ ಗೀತಾ ಹಾಗೂ 1 ತಿಂಗಳುಗಳ ಕಾಲ ನಮಗೆ ಶಿಬಿರವನ್ನು ನಡೆಸಲು ಸಂಪೂರ್ಣ ಸಹಕಾರವನ್ನು ನೀಡಿದ ಶ್ರೀ ಪುರುಷೋತ್ತಮ ಇವರಿಬ್ಬರಿಗೂ ಸನ್ಮಾನಿಸಿ ಗೌರವಿಸ–ಲಾಯಿತು. ನಂತರ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ದಕ್ಷಿಣಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಮಂಗಳೂರು ನಿರ್ದೇಶಕರು ಹಾಗೂ ಕೊಕ್ಕಡ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, ಅಧ್ಯಕ್ಷರಾದ ಕುಶಾಲಪ್ಪ ಗೌಡ, ಕೊಕ್ಕಡ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘ ಉಪಾಧ್ಯಕ್ಷರಾದ ಈಶ್ವರ್ ಭಟ್ ಹಿತ್ತಿಲು, ಕೊಕ್ಕಡ ಶ್ರೀರಾಮ ಸೇವಾ ಟ್ರಸ್ಟ್ (ರಿ.), ಅಧ್ಯಕ್ಷರು ಹಾಗೂ ಸೇವಾಭಾರತಿ(ರಿ.), ಕನ್ಯಾಡಿ ಕಾರ್ಯದರ್ಶಿ ಬಾಲಕೃಷ್ಣ, ಶ್ರೀ ದುರ್ಗಾ ಮಾತೃ ಮಂಡಳಿಯ ಖಜಾಂಚಿ ಶ್ರೀಮತಿ ಬಬಿತಾ, ಶ್ರೀ ದುರ್ಗಾ ಮಾತೃಮಂಡಳಿಯ ಸದಸ್ಯರಾದ ಶ್ರೀಮತಿ ಸುಮತಿ, ಟೈಲರಿಂಗ್ ತರಬೇತುದಾರರಾದ ಗೀತಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸೇವಾಭಾರತಿ ಕನ್ಯಾಡಿಯ ಅಕೌಂಟೆಂಟ್ ಅಕ್ಷತಾ ಸ್ವಾಗತಿಸಿ, ಡಾಕ್ಯುಮೆಂಟೇಶನ್, ಮಾನಿಟರಿಂಗ್ ಮತ್ತು ಇವಲ್ಯೂವೇಟಿಂಗ್ ಕೋಆರ್ಡಿನೇಟರ್ ಸುಮ ಕಾರ್ಯಕ್ರಮ ನಿರೂಪಿಸಿ, ಶ್ರೀರಾಮ ಸೇವಾ ಟ್ರಸ್ಟ್(ರಿ.), ಸದಸ್ಯರಾದ ಪ್ರತಿಮಾ ಧನ್ಯವಾದವಿತ್ತರು. ಒಟ್ಟು 63 ಮಂದಿ ಶಿಬಿರಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಅಕ್ಟೋಬರ್ ತಿಂಗಳಲ್ಲಿ ಸೇವಾಧಾಮದ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನಗೊಂಡು ಮನೆಗೆ ಮರಳಿದವರು




ಶ್ರೀ ಪ್ರಶಾಂತ್ ಅರಸೀಕೆರೆ ಮತ್ತು ಶ್ರೀಮತಿ ಸರೋಜಾ ಬಾಯಿ, ಅರಸೀಕೆರೆ



ಶ್ರೀಮತಿ ಲಕ್ಷ್ಮೀ, ಕೊಡಗು

## ಸೇವಾನಿಧಿ ದಾನಿಗಳು

ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಕಾರ್ತಿಕ್ ಕೆ, ನೇತ್ರಾವತಿ
ಶ್ರೀ ಮಧುಸೂದನ್ ಎಂ.ಜಿ, ಉಜಿರೆ
ಶ್ರೀ ಬಿ. ಪುರಂದರ, ಕನ್ಯಾಡಿ
ಶ್ರೀ ರಜತ್ ಕುಮಾರ್ ಜೆ.ಡಿ, ವೇಣೂರು
ಶ್ರೀ ಅದ್ವೈತ್ ಪೈ, ಕನ್ಯಾಡಿ
ಶ್ರೀಮತಿ ವಸಂತಿ ಗೌಡ, ದೊಂಡೋಲೆ
ಶ್ರೀಮತಿ ಶಾಂತಕುಮಾರಿ, ಉಜಿರೆ
ಶ್ರೀ ರಾಘವೇಂದ್ರ ಶಾಸ್ತ್ರಿ, ಧರ್ಮಸ್ಥಳ
ಶ್ರೀ ಡಿಎನ್ ಗಿರೀಶ್, ಧರ್ಮಸ್ಥಳ
ಶ್ರೀ ರಾಮದಾಸ್ ಭಂಡಾರ್ಕರ್, ಹಳೆಪೇಟೆ
ಶ್ರೀ ಶ್ರೀಧರ್ ಕೆ.ವಿ, ಉಜಿರೆ
ಶ್ರೀ ಪುರುಷೋತ್ತಮ್ ಡಿ.ಎ., ಧರ್ಮಸ್ಥಳ
ಶ್ರೀ ಶಿವಕುಮಾರ್ ಆರ್ಟ್ಸ್, ಹಳೆಪೇಟೆ
ಶ್ರೀ ಸುನಿಲ್ ಕುಮಾರ್ ಜೈನ್, ನೇತ್ರಾವತಿ
ಡಾ. ರಾಮಕೃಷ್ಣ ಭಟ್, ಕನ್ಯಾಡಿ
ಶ್ರೀಮತಿ ಬಬಿತಾ, ಕನ್ಯಾಡಿ
ಶ್ರೀ ಜಯಾನಂದ ಎಂ, ಕನ್ಯಾಡಿ
ಶ್ರೀ ಮದ್ವಮೂರ್ತಿ, ಉಡುಪಿ
ಶ್ರೀ ರಾಜೇಶ್ ಫಡ್ಕೆ, ಕೆಲ್ಲಗುತ್ತು
ಎಂ.ಎಸ್. ವೆಲ್‌ವೆಟ್ ಟ್ರಾವೆಲ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು
ಸಂತೃಪ್ತಿ ಆರ್. ಫಡ್ಕೆ, ಕೆಲ್ಲಗುತ್ತು
ಶ್ರೀ ಅವಿನಾಶ್ ಶೆಟ್ಟಿ, ನೇತ್ರಾವತಿ
ಶ್ರೀ ಬಾಲಕೃಷ್ಣ ರಾವ್, ಕನ್ಯಾಡಿ
ಶ್ರೀ ಮದ್ವರಾಜ್ ಎಂ.ಜಿ, ಧರ್ಮಸ್ಥಳ
ಶ್ರೀ ಕೆ. ಪುರಂದರ ರಾವ್, ದೊಂಡೋಲೆ
ಶ್ರೀಮತಿ ಜಯಂತಿ ಪಿ.ರಾವ್, ದೊಂಡೋಲೆ
ಶ್ರೀ ಸಂತೋಷ್ (ಸ್ವಸ್ತಿಕ್ ಸ್ಟೋರ್), ಕೊಕ್ಕಡ
ಶ್ರೀ ನಿತಿನ್ (ಬಾಂಬೆಡೈನ್), ಉಜಿರೆ
ಶ್ರೀ ಸುಹಾಸ್ ಲೆಕ್ಕಡಿ
ಶ್ರೀ ಅಕ್ಷಯ್ ಪಾಟಾಲಿ, ಪುತ್ತೂರು
ಶ್ರೀಮತಿ ದಿವ್ಯಾ ಪುರಂದರ ಬೆಂಗಳೂರು
ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
ಬೇಬಿ. ಶ್ರೀ ಬಿಲ್ವಾನಿ, ಉಜಿರೆ
ಶ್ರೀ ಅರ್ಜುನ್, ತೀರ್ಥಹಳ್ಳಿ
ಶ್ರೀ ಬಾಲಸುಬ್ರಮಣ್ಯ, ಬೆಂಗಳೂರು
ಶ್ರೀ ಅಖಿಲೇಶ್, ಪುತ್ತೂರು
ಶ್ರೀ ಸುರೇಂದ್ರ ಕುಡುವ, ಉಜಿರೆ
ಶ್ರೀ ಅಜಯ್ ರಾವ್ ಕೆ., ಮಂಗಳೂರು
ಶ್ರೀ ಸುಕೇಶ್, ಪುತ್ತೂರು
ಶ್ರೀ ಪ್ರಿಜೇಶ್, ಧರ್ಮಸ್ಥಳ
ಶ್ರೀ ಜಿ. ಪುಟ್ಟಸ್ವಾಮಿ, ಉಜಿರೆ
ಶ್ರೀ ವಿ.ಎಸ್. ಕಲಚರಿ, ಬೆಂಗಳೂರು
ಶ್ರೀ ರಾಘವೇಂದ್ರ ಎಂ. ಮೊಗವೀರ, ಕೊಕ್ಕಡ
ಶ್ರೀ ಅರ್ಜುನ್ ಸಿ.
ಶ್ರೀ ನೀಲಕಂಠ, ನಾರ್ಯ
ಶ್ರೀ ಗಣೇಶ್ ಭಟ್, ಉಜಿರೆ
ಶ್ರೀ ಸುಶ್ಮಿತಾ, ನಾವೂರು
ಶ್ರೀ ಸುನಿಲ್ ಪಿ.ಎನ್, ಕನ್ಯಾಡಿ
ಶ್ರೀ ಸುರೇಶ್ ರಾಜು ಬೆಂಗಳೂರು
ಶ್ರೀ ಕೆ.ರಮೇಶ್ ಪೂಜಾರಿ, ಬೆಂಗಳೂರು
ಶ್ರೀ ರಮಾನಾಥ ಪ್ರಭು, ಬೆಂಗಳೂರು
ಶ್ರೀ ಶೆಲ್‌ಡನ್ ಮೋನಿಸ್ ಮದ್ದಡ್ಕ
ಶ್ರೀ ಅಣ್ಣು ದೇವಾಡಿಗ, ನೇತ್ರಾವತಿ
ಶ್ರೀ ರಾಘವೇಂದ್ರ ತೇಜ, ಕೆನರಾಬ್ಯಾಂಕ್, ಧರ್ಮಸ್ಥಳ

## ದೇಣಿಗೆ ನೀಡಿದ ಸಂಘ-ಸಂಸ್ಥೆಗಳು

ಹವ್ಯಕ ವಲಯ ಉಜಿರೆ
ಶ್ರೀಮತಿ ಸ್ವರ್ಣಗೌರಿ, ಧರ್ಮಸ್ಥಳ
ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.), ಸೌತಡ್ಕ
ಕೆಮ್‌ಟ್ರೆಂಡ್ ಕೆಮಿಕಲ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು

## ಮಹನೀಯ ದಾನಿಗಳು

ಕೊಕ್ಕಡ ಪ್ರೈಮರಿ ಸೊಸೈಟಿ
ಶ್ರೀ ಲಿಖಿತ್ ರೈ ಬಂಟ್ವಾಳ
ಶ್ರೀಮತಿ ಅರ್ಚನಾ ಎ ಉಡುಪ ಬೆಂಗಳೂರು
ಶ್ರೀಮತಿ ಶಿಲ್ಪಶ್ರೀ ಕೊಕ್ಕಡ
ಶ್ರೀಮತಿ ನೀಲಮ್ ಗುಪ್ತ, ರಾಜಸ್ಥಾನ
ಶ್ರೀಮತಿ ಕವಿತಾ ಪ್ರಶಾಂತ್, ಉಡುಪಿ
ಶ್ರೀ ಸಂತೋಷ್ ಪಿ.
ಶ್ರೀ ಶೇಖರ್, ಬೈಪಾಡಿ
ಶ್ರೀ ಎಸ್ ಎನ್ ಬಾಲಾಜಿ, ಬೆಂಗಳೂರು
ಶ್ರೀ ರಜತ್ ಕುಮಾರ್, ಧರ್ಮಸ್ಥಳ
ಶ್ರೀಮತಿ ಶಾಂತಿ, ಬೆಂಗಳೂರು
ಶ್ರೀಮತಿ ರಚಿತಾ ರಾಮ್, ಬೆಂಗಳೂರು
ಶ್ರೀ ರಬೀಂದ್ರನಾಥ್, ಬೆಳ್ತಂಗಡಿ
ಶ್ರೀ ಗಣೇಶ್ ಕಲ್ಯ, ಕೊಕ್ಕಡ
ಶ್ರೀಮತಿ ಪ್ರಜ್ಞಾ, ಕುಮಟ
ಶ್ರೀಮತಿ ವರ್ಷ, ನೆಲ್ಯಾಡಿ
ಶ್ರೀ ಎಚ್ ಮಹಾವೀರ ಇಂದ್ರ, ಕಡಬ

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ಸಂಪತ್ ಆದ ನಾನು ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲೂಕಿನಿಂದ ಬಂದಿರುತ್ತೇನೆ. ನಾನು ಬೈಕ್‌ನಲ್ಲಿ ತೆರಳುತ್ತಿದ್ದ ಸಂದರ್ಭದಲ್ಲಿ ಬೈಕಿಂದ ಬಿದ್ದು ಬೆನ್ನುಹುರಿ ಅಪಘಾತಕ್ಕೆ ಒಳಗಾಗಿರುತ್ತೇನೆ. T4 complete Injury ಆಗಿರುತ್ತದೆ. MAAX Hospital ಶಿವಮೊಗ್ಗದಲ್ಲಿ ನಾನು ಚಿಕಿತ್ಸೆ ಪಡೆದು ನಂತರ ಸೇವಾಧಾಮದಲ್ಲಿ ನಾನು 3 ತಿಂಗಳು 8 ದಿನಗಳ ಕಾಲ ಫಿಸಿಯೋಥೆರಪಿ ಮತ್ತು ಯೋಗವನ್ನು ಪಡೆಯುವುದರ ಮೂಲಕ ಪುನಶ್ಚೇತನಗೊಂಡಿರುತ್ತೇನೆ. ಈಗ ನಾನು ನನ್ನ ಎಲ್ಲಾ ಕೆಲಸಗಳನ್ನು ನಾನೇ ಸ್ವತಃ ಮಾಡಿಕೊಳ್ಳುತ್ತಿದ್ದೇನೆ.

ಇಲ್ಲಿ ನನಗೆ ವೀಲ್‌ಚೇರ್ ಬಳಸುವುದರ ಬಗ್ಗೆ ಅರಿವು ಮೂಡಿಸಿದ್ದಾರೆ. ಹಾಗೂ ಒತ್ತಡದ ಗಾಯಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಹಾಗೂ ಸರಕಾರದ ಸವಲತ್ತುಗಳ ಬಗೆಗಿನ ಮಾಹಿತಿಗಳನ್ನು ಸಹಪಡೆದುಕೊಂಡಿದ್ದೇನೆ.

ಮುಂದಿನ ಜೀವನ ನಡೆಸುವಲ್ಲಿ ಬರುವ ಎಲ್ಲಾ ಸಮಸ್ಯೆಗಳ ಬಗ್ಗೆ ಅರಿತುಕೊಂಡು ಇದಕ್ಕೆಲ್ಲ ಕಾರಣರಾದ ಸೇವಾಭಾರತಿ ಸಂಸ್ಥಾಪಕರಿಗೆ ಅಧ್ಯಕ್ಷರಿಗೆ ಕಾರ್ಯದರ್ಶಿಗಳಿಗೆ ಹಾಗೂ ಎಲ್ಲಾ ಸಿಬ್ಬಂದಿವರ್ಗದವರಿಗೆ ನನ್ನ ಹೃದಯ ತುಂಬಿದ ಧನ್ಯವಾದಗಳು.

ಇಂತಿ ನಿಮ್ಮ ವಿಶ್ವಾಸಿ, **ಸಂಪತ್**

# ಸೇವಾಧಾಮದಲ್ಲಿ ದೀಪಾವಳಿ ಆಚರಣೆ






ಮುಂಗಾರಿನ ಮಳೆಯ ಅಬ್ಬರ ಇಳಿದು ಚುಮುಚುಮು ಚಳಿಗಾಲದ ಆರಂಭದಲ್ಲಿ ಬರುವ ಹಬ್ಬವೇ ದೀಪಾವಳಿ. ಈ ಹಬ್ಬ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಮಹತ್ವವನ್ನು ಹೊಂದಿದ್ದು ಸೌತಡ್ಕದ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಅಕ್ಟೋಬರ್ 30 ರಂದು ದೀಪಾವಳಿ ಹಬ್ಬವನ್ನು ಬಹಳ ಅದ್ದೂರಿಯಾಗಿ ಆಚರಿಸಲಾಯಿತು.

ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು ಸಮುದಾಯ–ದಿಂದ ದೂರ ಉಳಿಯುವುದರಿಂದ ಮಾನಸಿಕ ಖಿನ್ನತೆಗೆ ಹಾಗೂ ಹಲವು ದ್ವಿತೀಯಾಂತರ ಸಮಸ್ಯೆಗಳಿಗೆ ಒಳಗಾಗಿರುತ್ತಾರೆ. ಇಂತಹ ದಿವ್ಯಾಂಗರನ್ನು ಒಗ್ಗೂಡಿಸಿ ಅವರಿಗೆ ವೈದ್ಯಕೀಯ ಸೌಲಭ್ಯಗಳನ್ನು ನೀಡುವುದರ ಮೂಲಕ ಅವರ ಜೀವನಶೈಲಿಯನ್ನು ಸುಲಭಗೊಳಿಸುವ ಪ್ರಯತ್ನ ನಮ್ಮ ಸೇವಾಧಾಮ ಸಂಸ್ಥೆಯಿಂದ ನಿರಂತರವಾಗಿ ನಡೆಯುತ್ತಿದೆ.

ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್‌ನ ಅಧ್ಯಕ್ಷರಾದ ಕೆ. ಕೃಷ್ಣ ಭಟ್ ದೀಪಾವಳಿಯ ವಿಶೇಷತೆ ಬಗ್ಗೆ ತಿಳಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಾಂಪ್ರದಾಯಿಕ ರೀತಿಯಲ್ಲಿ ಗೋಪೂಜೆಯನ್ನು ನಡೆಸಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ, ಫಲಾನುಭವಿಗಳಿಗೆ, ಆರೈಕೆದಾರರಿಗೆ ಹಾಗೂ ಸಿಬ್ಬಂದಿವರ್ಗದವರಿಗೆ ವಿಭಿನ್ನ ಚಟುವಟಿಕೆಗಳನ್ನು ಮಾಡಿ ಜೊತೆಗೆ ನೃತ್ಯಪ್ರದರ್ಶನವನ್ನು ನೀಡಿ ಎಲ್ಲರನ್ನು ಮನರಂಜಿಸ–ಲಾಯಿತು. ಹಾಗೇ ಸೇವಾಧಾಮದ ಫಲಾನುಭವಿ ಶೇಖರ್ ಬೈಪಾಡಿ ತಮ್ಮ ಮಗಳ ಹುಟ್ಟುಹಬ್ಬವನ್ನು ಈ ಸಂದರ್ಭದಲ್ಲಿ ಆಚರಿಸಿಕೊಂಡರು. ಅಮೃತ ಗಳಿಗೆಯಲ್ಲಿ ಅಮೃತಹಸ್ತದಲ್ಲಿ ಹಣತೆಯನ್ನು ಹಚ್ಚಿ ಪಟಾಕಿಯನ್ನು ಸಿಡಿಸಿ ದೀಪಾವಳಿಯನ್ನು ಸಂಭ್ರಮಿಸಲಾಯಿತು.

ಕನ್ಯಾಡಿಯ ಸೇವಾಭಾರತಿಯ ಅಧ್ಯಕ್ಷರಾದ ಶ್ರೀಮತಿ ಸ್ವರ್ಣಗೌರಿ ಮುಂಬರುವ ನವೆಂಬರ್ 14ಕ್ಕೆ ನೂತನ ಕಟ್ಟಡದ ಭೂಮಿಪೂಜೆ ಮತ್ತು ಶಿಲನ್ಯಾಸದ ಪ್ರತಿಯನ್ನು ನೀಡಿ ಎಲ್ಲರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ದಾನಿಗಳು, ಹಿತೈಷಿಗಳು, ಸಲಹಾ ಸಮಿತಿಯ ಸದಸ್ಯರು, ಫಲಾನುಭವಿಗಳು, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು, ಆರೈಕೆದಾರರು, ಸ್ವಯಂಸೇವಕರು ಹಾಗೂ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಒಟ್ಟು 60 ಮಂದಿ ಭಾಗವಹಿಸಿದ್ದರು. ಡಾಕ್ಯುಮೆಂಟೇಶನ್ ಮಾನಿಟರಿಂಗ್ ಮತ್ತು ಇವಲ್ಯೂವೇಟಿಂಗ್ ಕೋಆರ್ಡಿನೇಟರ್ ಸುಮ ಸ್ವಾಗತಿಸಿ, ನಿರೂಪಿಸಿದರು. ಸಂಸ್ಥೆಯ ಸಂಸ್ಥಾಪಕರಾದ ಕೆ. ವಿನಾಯಕ ರಾವ್ ಧನ್ಯವಾದವಿತ್ತರು.

# ಬೆನ್ನುಹುರಿ ಅಪಘಾತದ ಬಗ್ಗೆ ಮಾಹಿತಿ ಕಾರ್ಯಾಗಾರ

**28ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಜೊತೆಜೊತೆಗೆ ಶಿಬಿರಾರ್ಥಿಗಳಿಗೆ ಬೆನ್ನುಹುರಿ ಅಪಘಾತ ಮತ್ತು ಅದರ ನಿರ್ವಹಣೆ ಬಗ್ಗೆ ಮಾಹಿತಿ ಕಾರ್ಯಾಗಾರವನ್ನು ಶ್ರೀರಾಮ ಮಂದಿರ ಸೇವಾಟ್ರಸ್ಟ್ (ರಿ.), ಕೊಕ್ಕಡದಲ್ಲಿ ನಡೆಸಲಾಯಿತು.**

**ಸೇವಾಭಾರತಿಯ ದಕ್ಷಿಣ ಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಕುಸುಮಾಧರ್ 63 ಮಂದಿ ಶಿಬಿರಾರ್ಥಿಗಳಿಗೆ ಕಾರ್ಯಾಗಾರವನ್ನು ನಡೆಸಿಕೊಟ್ಟರು.**









*Life would be tragic if it weren't funny*

# ಶಿಶಿಲದಲ್ಲಿ 29ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನೆ




ಸೇವಾಭಾರತಿ (ರಿ.), ಕನ್ಯಾಡಿ ಇದರ ನೇತೃತ್ವದಲ್ಲಿ ಸಬಲಿನಿ ಯೋಜನೆಯಡಿ ಶ್ರೀ ದುರ್ಗಾಪರಮೇಶ್ವರಿ ಯುವಕಮಂಡಲ ವೈಕುಂಠಪುರ, ಶಿಶಿಲ ಮತ್ತು ಗ್ರಾಮಪಂಚಾಯತಿ ಶಿಶಿಲ ಇವುಗಳ ಸಹಭಾಗಿತ್ವದಲ್ಲಿ ಮಹಿಳೆಯರಿಗಾಗಿ ಒಂದು ತಿಂಗಳ ಉಚಿತ ಟೈಲರಿಂಗ್ ತರಬೇತಿ ಶಿಬಿರವು ಅಕ್ಟೋಬರ್ 22 ರಂದು ಶಿಶಿಲ ವೈಕುಂಠಪುರ ಶ್ರೀ ದುರ್ಗಾಪರಮೇಶ್ವರಿ ಯುವಕ ಮಂಡಲ ಕಟ್ಟಡದಲ್ಲಿ ಉದ್ಘಾಟನೆಗೊಂಡಿತು.

ಶಿಶಿಲ ಟೈಲರಿಂಗ್ ತರಬೇತುದಾರರಾದ ಬಂಡಿಹೊಳೆಯ ವಿನಯ ಶೆಂಡ್ಯೆ ಉದ್ಘಾಟಿಸಿ ಕಾರ್ಯಕ್ರಮಕ್ಕೆ ಹಾರೈಸಿದರು. ಸೇವಾಭಾರತಿ ಕನ್ಯಾಡಿಯ ಟ್ರಸ್ಟಿ ಕೃಷ್ಣಪ್ಪ ಗುಡಿಗಾರ್ ಸ್ವಉದ್ಯೋಗದಿಂದ ಮಹಿಳೆಯರು ತನ್ನ ಕಾಲಮೇಲೆ ನಿಂತುಕೊಂಡು ಸ್ವಾವಲಂಬಿಯಾಗಿ ಬದುಕು ನಡೆಸಬೇಕೆಂದು ಅಧ್ಯಕ್ಷತೆ ವಹಿಸಿ ಮಾತುಗಳನ್ನಾಡಿದರು.

ಮುಖ್ಯ ಅತಿಥಿಗಳಾಗಿ ಶಿಶಿಲ ವೈಕುಂಠಪುರ ಶ್ರೀ ದುರ್ಗಾಪರಮೇಶ್ವರಿ ಯುವಕ ಮಂಡಲದ ಅಧ್ಯಕ್ಷ ಹರೀಶ್ ಕೊಳಂಬೆ ಉಪಸ್ಥಿತರಿದ್ದರು.


ಕಾರ್ಯಕ್ರಮದಲ್ಲಿ ಒಟ್ಟು 20 ಮಂದಿ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಅಂಗನವಾಡಿ ಕಾರ್ಯಕರ್ತೆ ಯಶೋಧ ಸ್ವಾಗತಿಸಿ, ಸೇವಾಭಾರತಿಯ ಡಾಕ್ಯುಮೆಂಟೇಶನ್ ಮಾನಿಟರಿಂಗ್ ಮತ್ತು ಇವಲ್ಯೂವೇಟಿಂಗ್ ಕೋಆರ್ಡಿನೇಟರ್ ಸುಮ ಕಾರ್ಯಕ್ರಮ ನಿರೂಪಿಸಿ, ಸೇವಾಭಾರತಿಯ ಸ್ವಯಂಸೇವಕರಾದ ಚಂದನ್ ಗುಡಿಗಾರ್ ಧನ್ಯವಾದವಿತ್ತರು.

## ಅಕ್ಟೋಬರ್ ತಿಂಗಳ ಸೇವಾ ಕಾರ್ಯಗಳು

| | | |
|---|---|---|
| 1. | ಗಾಲಿಕುರ್ಚಿ ವಿತರಣೆ | – 2 |
| 2. | ನೀರಿನ ಹಾಸಿಗೆ | – 1 |
| 3. | ಸೆಲ್ಫ್ ಕೇರ್ ಮತ್ತು ಮೆಡಿಕಲ್ ಕಿಟ್ | – 47 |

# ಸೇವಾ ಸಂಗಮ
# ಆನ್‌ಲೈನ್ ಕಾರ್ಯಾಗಾರ



ಅಕ್ಟೋಬರ್ ತಿಂಗಳ ಸೇವಾಸಂಗಮ ಆನ್‌ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕುಮಾರಿ ಫೌಝಿಯಾ ನಗರ ಪುನರ್ವಸತಿ ಕಾರ್ಯಕರ್ತೆ (URW) ಬೆಳ್ತಂಗಡಿ ಇವರು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ UDID ಮತ್ತು ಪಿಂಚಣಿ ಸೇವೆಗಳ ಕುರಿತು ಮಾಹಿತಿ ಇತ್ತರು. ಕಾರ್ಯಾಗಾರದಲ್ಲಿ ಒಟ್ಟು 100 ಮಂದಿ ಭಾಗವಹಿಸಿದ್ದರು.

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ. ತಮ್ಮ ಈ ಸೇವಾಕಾರ್ಯಕ್ಕೆ ಕೃತಜ್ಞತೆಗಳು...


ಶ್ರೀ ಚಂದನ್ ಗುಡಿಗಾರ್, ಅಲೆಕ್ಕಿ


ಶ್ರೀಮತಿ ರಚಿತಾ ರಾವ್, ಬೆಂಗಳೂರು


ಶ್ರೀಮತಿ ಅರ್ಚನಾ ಎಸ್. ಉಡುಪ, ಬೆಂಗಳೂರು


ಶ್ರೀ ಲಿಖಿತ್ ರಾವ್, ಪುತ್ತೂರು


ಕು। ಅಕ್ಷತಾ, ನಿಡ್ಲೆ


ಶ್ರೀ ರಜತ್ ಕುಮಾರ್ ಜೆ.ಡಿ, ವೇಣೂರು




ಶ್ರೀ ಕುಸುಮಾಧರ್, ಹೇರಾ


ಶ್ರೀ ದಿವಿರಾಜ್ ಡಿ.ಪಿ, ಪುತ್ತೂರು




## ಅಕ್ಟೋಬರ್ ತಿಂಗಳಲ್ಲಿ ಉಚಿತ ಮತ್ತು ರಿಯಾಯಿತಿ ದರದಲ್ಲಿ ಗಾಲಿಕುರ್ಚಿ ವಿತರಣೆ


ಶ್ರೀ ಜಗದೀಶ್ ಅಂಚನ್, ಮಲ್ಪೆ


ಶ್ರೀ ಸುಂದರ ಮಲೆಕುಡಿಯ, ಶಿರ್ಲಾಲು

# ಭೂಮಿಪೂಜೆ ಮತ್ತು ಶಿಲಾನ್ಯಾಸ



## ಸಭಾಕಾರ್ಯಕ್ರಮ : ಪೂರ್ವಾಹ್ನ 10.30ಕ್ಕೆ

**ದಿವ್ಯ ಉಪಸ್ಥಿತಿ** : **ಶ್ರೀ ಶ್ರೀ ಶ್ರೀ ಸದ್ಗುರು ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿಗಳು** ಶ್ರೀರಾಮ ಕ್ಷೇತ್ರ, ಕನ್ಯಾಡಿ-II
**ಶಿಲಾನ್ಯಾಸ** : **ಶ್ರೀಯುತ ತಿಪ್ಪೇಸ್ವಾಮಿ** ದಕ್ಷಿಣ ಮಧ್ಯಕ್ಷೇತ್ರೀಯ ಕಾರ್ಯವಾಹರು, ರಾ. ಸ್ವ. ಸಂಘ, ಬೆಂಗಳೂರು
**ಅಧ್ಯಕ್ಷತೆ** : **ಶ್ರೀಮತಿ ಸ್ವರ್ಣಗೌರಿ** ಅಧ್ಯಕ್ಷರು, ಸೇವಾಭಾರತಿ

## ಗೌರವ ಉಪಸ್ಥಿತಿ

**ಕ್ಯಾಪ್ಟನ್ ಬ್ರಿಜೇಶ್ ಚೌಟ**
ಮಾನ್ಯ ಲೋಕಸಭಾ ಸದಸ್ಯರು, ದಕ್ಷಿಣ ಕನ್ನಡ

**ಶ್ರೀ ಹರೀಶ್ ಪೂಂಜಾ**
ಮಾನ್ಯ ಶಾಸಕರು, ಬೆಳ್ತಂಗಡಿ ವಿಧಾನಸಭಾ ಕ್ಷೇತ್ರ

**ಶ್ರೀ ಅಶೋಕ್ ಕುಮಾರ್ ರೈ**
ಮಾನ್ಯ ಶಾಸಕರು, ಪುತ್ತೂರು ವಿಧಾನಸಭಾ ಕ್ಷೇತ್ರ

**ಶ್ರೀ ಗುರುರಾಜ್ ಶೆಟ್ಟಿ ಗಂಟಿಹೊಳೆ**
ಮಾನ್ಯ ಶಾಸಕರು, ಬೈಂದೂರು ವಿಧಾನಸಭಾ ಕ್ಷೇತ್ರ

**ಶ್ರೀ ಪ್ರತಾಪ್ ಸಿಂಹ ನಾಯಕ್**
ಮಾನ್ಯ ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರಕಾರ

**ಶ್ರೀ ಕಿಶೋರ್ ಕುಮಾರ್, ಪುತ್ತೂರು**
ಮಾನ್ಯ ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರಕಾರ

**ಶ್ರೀ ಪಿ. ಶ್ರೀನಿವಾಸ್ ರಾವ್**
ಮಾನ್ಯ ಉಪಾಧ್ಯಕ್ಷರು, ಗ್ರಾಮ ಪಂಚಾಯತು, ಧರ್ಮಸ್ಥಳ

**ಡಾ. ಸೆಂಥಿಲ್ ಎಸ್ ಕುಮಾರ್**
CEO, APD (Association of People with Disability, Bengaluru)

**ಶ್ರೀ ಕೆ. ಶರತ್‌ಕೃಷ್ಣ ಪಡುವೆಟ್ನಾಯ**
ಆಡಳಿತ ಮೊಕ್ತೇಸರರು, ಶ್ರೀ ಜನಾರ್ದನ ಸ್ವಾಮಿ ದೇವಸ್ಥಾನ, ಉಜಿರೆ

**ಶ್ರೀ ಜಯಪ್ರಕಾಶ್ ಶೆಟ್ಟಿ**
DGM, Selco Solarlight Private Limited, Bengaluru

**ರೋ| ಪೂರನ್ ವರ್ಮ**
ಅಧ್ಯಕ್ಷರು, ರೋಟರಿ ಕ್ಲಬ್, ಬೆಳ್ತಂಗಡಿ

**ಶ್ರೀ ಚೈತ್ರೇಶ್ ಇಳಂತಿಲ**
ಅಧ್ಯಕ್ಷರು, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ಬೆಳ್ತಂಗಡಿ

**ಶ್ರೀ ಸಂಪತ್‌ರತ್ನ ಎಸ್. ರಾವ್**
Consulting Engineer, SLV Constructions, Ujire

**ಶ್ರೀ ನವೀನ್ ವಜ್ರವೇಲು**
Senior Manager, COMSCOPE India Private Limited, Bengaluru

**CA ಗುಜ್ಜಾಡಿ ಪ್ರಭಾಕರ್ ನರಸಿಂಹ ನಾಯಕ್**
ಸದಸ್ಯರು, ಸಲಹಾ ಮಂಡಳಿ, ಸೇವಾಭಾರತಿ

**ಶ್ರೀ ಕೆ. ಕೃಷ್ಣ ಭಟ್, ಕೊಕ್ಕಡ**
ಅಧ್ಯಕ್ಷರು, ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ), ಸೌತಡ್ಕ

**ಶ್ರೀ ಚನ್ನಯ್ಯಸ್ವಾಮಿ**
ಕಾರ್ಯದರ್ಶಿ, ಸೇವಾಭಾರತಿ, ಕರ್ನಾಟಕ ದಕ್ಷಿಣಪ್ರಾಂತ

**ಶ್ರೀ ಶ್ರೀಧರ್ ಕೆ.ವಿ.**
ಸಂಚಾಲಕರು, ಆರೋಗ್ಯಮ್ ವಿಭಾಗ-ರಕ್ತನಿಧಿ

**ಶ್ರೀಮತಿ ಶಾಂತಾ ಪಿ. ಶೆಟ್ಟಿ**
ಅಧ್ಯಕ್ಷರು, ಶ್ರೀ ದುರ್ಗಾಮಾತೃಮಂಡಳಿ, ಕನ್ಯಾಡಿ

**ಶ್ರೀಮತಿ ವತ್ಸಲ ಪಿ**
ಅಧ್ಯಕ್ಷರು, ಸೇವಾಭಾರತಿ (2004-2007)

**ಶ್ರೀ ಹರೀಶ್ ರಾವ್ ಎಂ**
ಅಧ್ಯಕ್ಷರು, ಸೇವಾಭಾರತಿ (2013-2016)

## ಗೌರವ ಸಮರ್ಪಣೆ

**ಶ್ರೀಯುತ ರೋಶನ್ ಬೆಳ್ಮಣ್**
ಸಂಸ್ಥಾಪಕರು, ಹ್ಯುಮಾನಿಟಿ ಟ್ರಸ್ಟ್, ಬೆಳ್ಮಣ್

**ಶ್ರೀಯುತ ಅರ್ಜುನ್ ಭಂಡಾರ್ಕಾರ್**
ಸಂಸ್ಥಾಪಕರು, ಸೇವ್ ಲೈಫ್ ಚಾರಿಟೇಬಲ್ ಟ್ರಸ್ಟ್, ಮಂಗಳೂರು

## ತಮಗೆಲ್ಲರಿಗೂ ಆದರದ ಸ್ವಾಗತ

| | | | | | |
|---|---|---|---|---|---|
| **ಗಿರೀಶ್ ರಾವ್ ಕೆ. ಯು.** | **ಬಾಲಕೃಷ್ಣ ನೈಮಿಷ** | **ಬಿ. ಕೃಷ್ಣಪ್ಪ ಗುಡಿಗಾರ್** | **ವಿಷ್ಣುಪ್ರಸಾದ್ ತೆಂಕಿಲ್ಲಾಯ** | **ಕೆ. ವಿನಾಯಕ ರಾವ್** | **ಕೆ. ಪುರಂದರ ರಾವ್** |
| ಉಪಾಧ್ಯಕ್ಷರು | ಕಾರ್ಯದರ್ಶಿ | ಟ್ರಸ್ಟಿ | ಟ್ರಸ್ಟಿ | ಖಜಾಂಚಿ | ಸಂಚಾಲಕರು, ಸೇವಾಧಾಮ |

ಸೇವಾಭಾರತಿ

**ಹಾಗೂ ಸಲಹಾ ಮಂಡಳಿ ಸದಸ್ಯರು, ಪೋಷಕರು, ಸಿಬ್ಬಂದಿಗಳು, ಹಾಗೂ ಸ್ವಯಂಸೇವಕರುಗಳ ಸವಿನಯ ಆಮಂತ್ರಣ.**

## ವಿಜ್ಞಾಪನೆ

ನಮ್ಮ ಸಂಸ್ಥೆ ಸೇವಾಭಾರತಿಗೆ 20ನೇ ವರ್ಷದ ಸಂಭ್ರಮ. ಕಳೆದ 20 ವರ್ಷಗಳಲ್ಲಿ ನಾವು ಸಾಮಾಜಿಕವಾಗಿ ಬೇರೆ ಬೇರೆ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಸೇವಾಕಾರ್ಯಗಳನ್ನು ನಿರಂತರ ಅನುಷ್ಠಾನ ಮಾಡುತ್ತಲೇ ಬಂದಿದ್ದೇವೆ.

ಸೇವಾಧಾಮ ಯೋಜನೆಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ, ಆರೋಗ್ಯಮ್ ಯೋಜನೆಯಡಿ ಅಂಬ್ಯುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸಬಲಿನಿ ಯೋಜನೆಯಡಿ ಉಚಿತ ಟೈಲರಿಂಗ್ ತರಬೇತಿಗಳು ಹೀಗೆ ಮೂರು ಯೋಜನೆಗಳನ್ನು ನಡೆಸುತ್ತಿದ್ದೇವೆ.

ಕಳೆದ ವರ್ಷ ಕನ್ಯಾಡಿಯಲ್ಲಿ 10 ಸೆಂಟ್ಸ್ ಜಾಗವು ಸರಕಾರದಿಂದ ಮಂಜೂರಾಗಿದ್ದು ಅದರಲ್ಲಿ ನಮ್ಮ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಆಶಾಕಿರಣವಾಗಿ ಒಂದು ಮಾದರಿ ಪುನಶ್ಚೇತನ ಕೇಂದ್ರಕ್ಕೆ ಕಟ್ಟಡವನ್ನು ನಿರ್ಮಿಸುವ ಯೋಜನೆಯನ್ನು ರೂಪಿಸಿದ್ದೇವೆ. ಈ ಕಟ್ಟಡದ ಒಟ್ಟು ಅಂದಾಜು ವೆಚ್ಚ 3 ಕೋಟಿ ರೂಪಾಯಿಗಳಾಗಿದ್ದು ಮೊದಲ ಹಂತವಾಗಿ ನೆಲಮಹಡಿಗೆ ಮಂಗಳೂರಿನ MRPL ನಿಂದ ರೂ.42 ಲಕ್ಷದಷ್ಟು ಮಂಜೂರು ಆಗಲಿದೆ. ಒಂದು ವರ್ಷದ ಅವಧಿಯೊಳಗೆ ಅದನ್ನು ನಿರ್ಮಾಣ ಮಾಡಬೇಕಾಗಿದೆ.

ಅನೇಕ ಕಂಪನಿಗಳಿಗೆ, ಕ್ಲಬ್ ಗಳಿಗೆ ನಮ್ಮ ಅಹವಾಲನ್ನು ಸಲ್ಲಿಸಿದ್ದು ಮುಂದಿನ ದಿನಗಳಲ್ಲಿ ಕಿಂಚಿತ್ತಾದರೂ ಸಿಗಬಹುದೆಂಬ ಆಶಾವಾದದಲ್ಲಿ ನಾವಿದ್ದೇವೆ.

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿಲ್ಲ.

ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

**LOCATION**

**Union Bank SB Account Details:**


Name : Sevabharathi
No : 139322010000383
IFSC : UBIN0913936
Bank : Union Bank of India,
Branch : UJIRE Branch

**DONATE HERE**

Srishti Graphics 8970137765

## ನಿಮಗಿದು ತಿಳಿದಿರಲಿ

ಬೆನ್ನುಮೂಳೆಯು 120 ಸ್ನಾಯುಗಳನ್ನು, ಸುಮಾರು 220 ಪ್ರತ್ಯೇಕ ಅಸ್ಥಿರಜ್ಜುಗಳು ಮತ್ತು 100 ಕೀಲುಗಳನ್ನು ಹೊಂದಿರುತ್ತದೆ. ಬೆನ್ನುಹುರಿ ಸುಮಾರು 35 ಗ್ರಾಂ. ತೂಗುತ್ತದೆ. ಸರಾಸರಿ ಪುರುಷನಲ್ಲಿ ಬೆನ್ನುಮೂಳೆಯ ಉದ್ದವು 70 ಸೆಂ, ಮತ್ತು ಸರಾಸರಿ ಮಹಿಳೆಯಲ್ಲಿ ಇದು 60 ಸೆಂ. ಬೆನ್ನುಹುರಿ ಕೇಂದ್ರ ನರಮಂಡಲದ ಭಾಗವಾಗಿದೆ ಮತ್ತು ಬೆನ್ನುಮೂಳೆಯೊಳಗೆ ಇರುತ್ತದೆ.



## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ.

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ.

**ಸೇವಾಪಥ :** ಮಾಸಿಕ ಈ–ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್‌ಕೇರ್ & ಮೆಡಿಕಲ್ ಕಿಟ್‌ಗಳು

### ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

| | |
|---|---|
| ರೂ. 2000/– | ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್‌ಗಳಿಗಾಗಿ ಸಹಕಾರ. |
| ರೂ. 6000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ |
| ರೂ. 4500/– | ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ |
| ರೂ. 3000/– | ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ |
| ರೂ. 10000/– | ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ |
| ರೂ. 15000/– | ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ |
| ರೂ. 10000/– | ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು |

### DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

### Support us for constructions of Rehabilitation Centre

A/c Name : Sevabharathi
A/c No : 139322010000383
IFSC : UBIN0913936
Account Type : Savings Account
Union Bank of India, UJIRE Branch

*We are put in situations to build our character... not destroy us*

# ಬೆನ್ನುಮುರಿತಕ್ಕೊಳಗಾದವರಿಗೆ ಬೆನ್ನೆಲುಬಾದ ಡಾಕ್ಟರ್




"ವೈದ್ಯೋ ನಾರಾಯಣ ಹರಿ" ಎಂಬಂತೆ ವೈದ್ಯಕೀಯ ಸೇವೆಗಳನ್ನು ಮಾಡುತ್ತಾ ಬಡಮಂದಿಯ ಆರೋಗ್ಯದಾತರಾಗಿರುವ ಡಾ। ಉದಯಶಂಕರ ಎಚ್.ಜಿ.ಯವರು 1968ರಲ್ಲಿ ಶ್ರೀ ಗಣೇಶ್ .ಎಚ್.ಜಿ ಮತ್ತು ಶ್ರೀಮತಿ ಶಾಂತಮ್ಮ ದಂಪತಿಯ ಪುತ್ರರಾಗಿ ಜನಿಸಿದರು. ವಿದ್ಯಾಧಿದೇವತೆ ಶ್ರೀ ಶಾರದೆಯ ಅನುಗ್ರಹದೊಂದಿಗೆ ಯಶಸ್ವಿ ಶೈಕ್ಷಣಿಕ ಕಲಿಕಾಯಾತ್ರೆ ಶ್ರೀಯುತರದ್ದು. ಮೂಡಿಗೆರೆ ತಾಲೂಕಿನ ಪ್ರತಿಷ್ಠಿತ ಜಾವಳಿ ಶಾಲೆಯಲ್ಲಿ ವಿದ್ಯಾರ್ಥಿ ವೇತನದಲ್ಲಿಯೇ ಉನ್ನತ ಶ್ರೇಣಿಯಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ, ಜೆ.ಸಿ.ಬಿ.ಎಂ. ಕಾಲೇಜು, ಶೃಂಗೇರಿಯಲ್ಲಿ ಪಿಯುಸಿ ಮತ್ತು 1985 ರಿಂದ 1990ರ ವರೆಗೆ ಮೈಸೂರಿನ ತಾತಯ್ಯನವರ ಅನಾಥಾಲಯದಲ್ಲಿದ್ದು, ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗ ಪಡೆದುಕೊಂಡು ಮೈಸೂರು ವಿಶ್ವವಿದ್ಯಾನಿಲಯಕ್ಕೆ 7ನೇ ಉನ್ನತ ಶ್ರೇಣಿಯಲ್ಲಿ ವೈದ್ಯಕೀಯ ಪದವಿ (ಎಂಬಿಬಿಎಸ್). 1994 ರಿಂದ 1996 ರ ವರೆಗೆ ಮೈಸೂರು ಮೆಡಿಕಲ್ ಕಾಲೇಜಿನಲ್ಲಿಯೇ ಕೀಲು ಮತ್ತು ಮೂಳೆಶಾಸ್ತ್ರದಲ್ಲಿ ಡಿಪ್ಲೋಮಾ. 2012 ರಲ್ಲಿ ಅಲ್ಟ್ರಾಸೋನೊಲಜಿಯಲ್ಲಿ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಲ್ಲಿ ಡಿಪ್ಲೋಮಾ

ಮುಂದಿನ ಪುಟಕ್ಕೆ....

ಪರೀಕ್ಷೆಯಲ್ಲಿ ಮೊದಲ ಉನ್ನತ ಶ್ರೇಣಿಯೊಂದಿಗೆ ಪದವಿ ಪಡೆದ ತಾವುಗಳು ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅನುಪಮವಾದುದು. 1996ರಲ್ಲಿ ಸರ್ಕಾರಿ ಸೇವೆಗೆ ಸೇರಿ 2001ರ ವರೆಗೆ ಹರಿಹರಪುರದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸೇವೆ. 2001 ರಿಂದ 2006ರ ವರೆಗೆ ಕೊಪ್ಪ ಸಾರ್ವಜನಿಕ ಆಸ್ಪತ್ರೆಯಲ್ಲಿ ಆರ್ಥೋಪೆಡಿಕ್ ಸರ್ಜನ್ ಆಗಿ ಸೇವೆ. ಇವೆರಡು ಆಸ್ಪತ್ರೆಯಲ್ಲಿ ಪ್ರಾಮಾಣಿಕವಾಗಿ, ಜನಾನುರಾಗಿಯಾಗಿ 9 ವರ್ಷಗಳ ಸೇವೆ ಸಲ್ಲಿಸಿ ನಂತರ ಸ್ವಯಂ ನಿವೃತ್ತಿ ಪಡೆದಿರುತ್ತಾರೆ. ಸರ್ಕಾರಿ ಸೇವಾ ಅವಧಿಯಲ್ಲಿ ಅವರ ಸೇವಾ ತತ್ಪರತೆ, ಆತ್ಮೀಯ ನಡವಳಿಕೆಯ ಚಿಕಿತ್ಸೆ ಇಂದಿಗೂ ಜನಮಾನಸದಲ್ಲಿ ಅಚ್ಚಳಿಯದೇ ಸದಾ ಹಸಿರಾಗಿದೆ.

ಸರ್ಕಾರಿ ಸೇವಾ ಅವಧಿಯಲ್ಲಿನ ತಮ್ಮ ನಗುಮೊಗದ ಸೇವೆ ಜನಜನಿತ. ಈ ಅವಧಿಯಲ್ಲಿ ತಮ್ಮ ಸಾಧನೆಗಳಲ್ಲಿ ಮುಖ್ಯವಾಗಿ ಹಲವಾರು ಉಚಿತ ಚಿಕಿತ್ಸಾ ಶಿಬಿರಗಳ ಸಂಘಟನೆ. ಪ್ರಸೂತಿಯ ಸಮಯದಲ್ಲಿ ಗರ್ಭಿಣಿಯೊಬ್ಬರಿಗೆ ತಾವೇ ರಕ್ತನೀಡಿ ಬದುಕಿಸಿದ ಅಪರೂಪದ ಘಟನೆ, ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ನಿಮ್ಮ ವೃತ್ತಿ ಬದುಕಿನ ಭವಿಷ್ಯದ ಸಾಲಿನ ಬೆಳಕಿನ ಚೇತನವಾಗಿದ್ದೀರಿ. ಸೇವೆಯ ಪಯಣ ಇನ್ನೊಂದು ಮಗ್ಗುಲಿಗೆ ಹೊರಳಿ 2006 ರಲ್ಲಿ ಸರ್ಕಾರಿ ಸೇವೆಗೆ ರಾಜೀನಾಮೆ ನೀಡಿ ತಮ್ಮ ಪತ್ನಿ ಶ್ರೀಮತಿ ರೇಖಾ ಅವರ ಒತ್ತಾಸೆಯೊಂದಿಗೆ ದಿನಾಂಕ 26–04–2006 ರಂದು ಸ್ವಂತ "ಸರ್ವರೋಗ ಪ್ರಶಮನೀ ಆಸ್ಪತ್ರೆ"ಯನ್ನು ಸ್ಥಾಪಿಸಿ ಗ್ರಾಮೀಣ ಪ್ರದೇಶದ ಜನರ ಸೇವೆಗೆ ತಾವು ಕಟಿಬದ್ಧರಾಗಿರುವುದು ತಮ್ಮ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಪ್ರಪ್ರಥಮ ಬಾರಿಗೆ ಕೊಪ್ಪದಲ್ಲಿ C-Arm ನೊಂದಿಗೆ ಕೀಲು ಮತ್ತು ಮೂಳೆ ಚಿಕಿತ್ಸೆ ಪ್ರಾರಂಭ, ಕೊಪ್ಪದಂತ ಗ್ರಾಮೀಣ ಪ್ರದೇಶದಲ್ಲಿ ಸುಸಜ್ಜಿತವಾದ Koppa Diagnostic and CT Scan centre ಸ್ಥಾಪಿಸಿ, ಜನಸಾಮಾನ್ಯರಿಗೂ ಕೈಗೆಟುಕುವ ದರದಲ್ಲಿ ಅತ್ಯುತ್ತಮ ಹಾಗೂ ನಿಖರ ಚಿಕಿತ್ಸೆಗೆ ಅವಕಾಶ ಕಲ್ಪಿಸಿರುವುದು ಶ್ಲಾಘನೀಯ. ಕಂಪ್ಯೂಟರೈಸ್ X-Ray ಸ್ಥಾಪಿಸಿ ಚಿಕಿತ್ಸಾ ವಿಧಾನದ ಉನ್ನತೀಕರಣ. 10,000ಕ್ಕೂ ಮೀರಿ ಕೀಲು ಮತ್ತು ಮೂಳೆ ಶಸ್ತ್ರಚಿಕಿತ್ಸೆ. 150ಕ್ಕೂ ಮೀರಿ ಕೀಲು ಮರುಜೋಡಣೆ, ಹಲವಾರು ಬೆನ್ನುಮೂಳೆ ಶಸ್ತ್ರಚಿಕಿತ್ಸೆ. ಶ್ರೀ ಬದರೀ ಶಂಕರಾಚಾರ್ಯ ಸಂಸ್ಥಾನಂ ಶ್ರೀ ಕ್ಷೇತ್ರ ಶಕಟಪುರಂನ ಆಸ್ಥಾನ ವೈದ್ಯರೆಂಬ ಮಾನ್ಯತೆ. ಭಾರತೀಯ ವೈದ್ಯಕೀಯ ಸಂಘ ಕೊಪ್ಪದ ಸಂಸ್ಥಾಪನ ಕಾರ್ಯದರ್ಶಿಯಾಗಿಯು ಸೇವೆಯನ್ನು ಸಲ್ಲಿಸಿದ ಹೆಗ್ಗಳಿಕೆ ಇವರದಾಗಿದೆ. 40,000 ಕ್ಕೂ ಹೆಚ್ಚು ಅಲ್ಟ್ರಾಸೌಂಡ್ ಸ್ಕ್ಯಾನಿಂಗ್. ಮೂಳೆ ತಜ್ಞರಾಗಿದ್ದೂ ಕೂಡ ಹೃದಯಘಾತದ ಸಂದರ್ಭದಲ್ಲಿ ಹಲವರಿಗೆ ಪ್ರಥಮ ಚಿಕಿತ್ಸೆಯನ್ನು ನೀಡಿ, ಹೆಚ್ಚಿನ ಚಿಕಿತ್ಸೆಗೆ ಅವಶ್ಯ ಮಾರ್ಗದರ್ಶನದೊಂದಿಗೆ ಹಲವು ಜೀವಗಳನ್ನು ಉಳಿಸಿದ ಧನ್ಯತೆ ಅವರದ್ದು.

2020ರಲ್ಲಿ ರೋಟರಿ ಬೆಸ್ಟ್ ಡಾಕ್ಟರ್ ಅವಾರ್ಡ್, 2021ರಲ್ಲಿ ಮಲ್ನಾಡ್ ಉತ್ಸವ ಅವಾರ್ಡ್ ಮತ್ತು Vijaya Karnataka 'Achievers of Karnataka' award–2022, ವೈದ್ಯಕೀಯ ಕ್ಷೇತ್ರದಲ್ಲಿ ವಿಶೇಷ ಸಾಧನೆಗಾಗಿ ಶ್ರೀಕ್ಷೇತ್ರ ಹರಿಹರಪುರ ಶ್ರೀಮಠದ ಪರಮಪೂಜ್ಯ ಜಗದ್ಗುರು ಶ್ರೀಶ್ರೀಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿಯವರು ದಿನಾಂಕ:09–09–2022 ರಂದು ಅನುಗ್ರಹ ಪೂರ್ವಕವಾಗಿ ನೀಡಿದ "ಸಾಧಕ ಶ್ರೀ" ಪ್ರಶಸ್ತಿ, ನಿಮ್ಮ ಸೇವಾಕಾರ್ಯಗಳನ್ನು ಗುರುತಿಸಿ ಇಂತಹ ಅಭೂತಪೂರ್ವವಾದ ಗೌರವಕ್ಕೆ ಪಾತ್ರರಾಗಿರುವಿರಿ. ಸೇವಾಭಾರತಿ ಸಂಸ್ಥೆಯ ಕಾರ್ಯಚಟುವಟಿಕೆಯಲ್ಲಿ ಕೈಜೋಡಿಸಿದ್ದು ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರನ್ನು ಗುರುತಿಸುವಿಕೆ ಯಲ್ಲಿ ತಮ್ಮದೇ ಪ್ರಶಮನೀ ಟ್ರಸ್ಟ್ ಮೂಲಕ ದಿವ್ಯಾಂಗರಿಗೆ ಸಹಾಯಹಸ್ತ ಚಾಚಿದ್ದಾರೆ. ರೋಟರಿ ಕ್ಲಬ್ ಕೊಪ್ಪದ ಮೂಲಕ ಸಾಧನ ಸಲಕರಣೆಗಳನ್ನು ವಿತರಣೆ ಮಾಡಿರುತ್ತಾರೆ. ಶಕಟಪುರಮಠ ಹಾಗೂ ಪ್ರಶಮನೀ ಆಸ್ಪತ್ರೆ ಕೊಪ್ಪ ಇವುಗಳ ಸಹಯೋಗದಲ್ಲಿ ಒಂದು ದಿನದ ಉಚಿತ ಆರೋಗ್ಯ ತಪಾಸಣೆ ಹಾಗೂ ಮಾಹಿತಿ ಶಿಬಿರಗಳನ್ನು ಹಮ್ಮಿಕೊಂಡಿರುತ್ತೇವೆ. ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಕೊಪ್ಪ ತಾಲೂಕಿನಲ್ಲಿ ವಿಶ್ವಬೆನ್ನುಹುರಿ ಅಪಘಾತ ದಿನಾಚರಣೆ ಹಾಗೂ ಗಾಲಿಕುರ್ಚಿ ಜಾಥಾವನ್ನು ಹಮ್ಮಿಕೊಂಡಿರು–ತ್ತೇವೆ. ಚಿಕ್ಕಮಗಳೂರು ಜಿಲ್ಲೆ ವಿವಿಧ ಮಠಮಂದಿರಗಳ ಮೂಲಕ ಸೇವಾಭಾರತಿ ಸಂಸ್ಥೆಗೆ ಧನಕ್ರೂಡಿಕರಣಕ್ಕಾಗಿ ಸಹಕಾರ ನೀಡಿರುತ್ತಾರೆ. ಶಕಟಪುರ ಮಠದ ವತಿಯಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ 11 ಗಾಲಿಕುರ್ಚಿಯನ್ನು ದೊರಕಿಸಿಕೊಡುವಲ್ಲಿ ತಮ್ಮ ಅತ್ಯಮೂಲ್ಯವಾದ ಸಮಯವನ್ನು ನೀಡಿರುತ್ತಾರೆ.

ಪ್ರಶಮನೀ ಆಸ್ಪತ್ರೆಗೆ ಆಗಮಿಸುವ ಎಲ್ಲಾ ದಿವ್ಯಾಂಗರಿಗೆ ಆಪ್ತ ಸಮಾಲೋಚನೆಯನ್ನು ನೀಡುತ್ತಾ ಅವರ ಬಾಳಲ್ಲಿ ಆಶಾಕಿರಣವಾಗಿರುತ್ತಾರೆ. ದಿನದ 24 ಗಂಟೆಗಳಲ್ಲಿಯೂ ಸೇವೆಗೆ ಲಭ್ಯವಾಗುವ ನೊಂದವರಿಗೆ ಸಾಂತ್ವನವಾಗುವ ಅನುಪಮ ಸೇವೆಯ ಪ್ರತಿರೂಪ, ಸರಳ–ಸಜ್ಜನಿಕೆಯ ಡಾಕ್ಟರ್ ಉದಯಶಂಕರ್ ವೈದ್ಯಕೀಯ ಬದುಕಿನ ಶ್ರೇಷ್ಠ ಹಾದಿಯನ್ನು ಸ್ಮರಿಸುತ್ತಾ ತಮ್ಮ ಸಾಮಾಜಿಕ ಸೇವೆ, ಆರೋಗ್ಯ ಸೇವೆ ಮತ್ತು ವಿಕಲಚೇತನರ ಕ್ಷೇತ್ರದಲ್ಲಿ ಮಾಡಿದ ಅನುಪಮ ಸಾಧನೆಯನ್ನು ಪರಿಗಣಿಸಿ ಮನಸಾರೆ ಗೌರವಿಸಿ ಸಮಸ್ತ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದವರ ಪುನಶ್ಚೇತನ ಕೇಂದ್ರ, ಸೌತಡ್ಕ ವತಿಯಿಂದ ಮನಪೂರ್ವಕವಾಗಿ ಅಭಿನಂದಿಸಿ "ಸೇವಾಶ್ರೇಷ್ಠ–2024" ಎಂಬ ಬಿರುದನ್ನು ನೀಡಿ ಸನ್ಮಾನಿಸಲಾಗಿದೆ.